ಕೇವಲ ಶಾಸಕರಾಗಿ ಕೂತಿದ್ದಾರೆ. ಇನ್ನು ರಮ್ಯಾ ಉರುಫ್ ದಿವ್ಯ ಸ್ಪಂದನ ಲೋಕಸಭೆಗೆ ಆಯ್ಕೆಯಾಗಿದ್ದಾಗ, ಅಲ್ಲಿನ ಕಲಾಪಗಳಲ್ಲಿ ಸಾಕಷ್ಟು ಹೋಂವರ್ಕ್ ಮಾಡಿಕೊಂಡು ಹೋಗುತ್ತಿದ್ದರೆಂಬ ವರದಿಗಳಿದ್ದವು. ಈಗಲೂ ಕಾಂಗ್ರೆಸ್ಸಿನ ಐಟಿ ಸೆಲ್ ಮುಂದಾಳಾಗಿ ಡಿಜಿಟಲ್ ಯುದ್ಧದಲ್ಲಿ ಬಿಜೆಪಿಗೆ ಕಠಿಣ ಸ್ಪರ್ಧೆ ಕೊಡುತ್ತ ಸುದ್ದಿಯಾಗಿದ್ದಾರೆ.



ಕಿರಣ್ ಖೇರ್

ಅಧಿಕಾರವೆಂಬುದು ಸಮಾಜ ಪರಿವರ್ತನೆಯ ಸಾಧನೆ ಎಂದು ತೋರಿಸಿಕೊಟ್ಟ ದೇವರಾಜ ಅರಸರಂಥ ಧೀಮಂತ ನಾಯಕರನ್ನು ಕಂಡ ನಾಡು ನಮ್ಮದು ಎಂಬ ಹಿನ್ನೆಲೆಯಲ್ಲಿ ನೋಡಿದರೆ, ಇವರಲ್ಲಿ ಯಾರೊಬ್ಬರೂ ಅಧಿಕಾರದ ನೈತಿಕ ಹೊಣೆಗಾರಿಕೆಯ ಅರಿವು ಪ್ರದರ್ಶಿಸಿದ ಸಂದರ್ಭವೇ ಇಲ್ಲ. ಯಾರೊಬ್ಬರೂ ತಮ್ಮ ಅಧಿಕಾರದ ಮೂಲಕ ಸಮಾಜಕ್ಕೆ ಯಾವ ಅರ್ಥಪೂರ್ಣ ಕೊಡುಗೆ ಕೊಟ್ಟ ನಿದರ್ಶನವೂ ಇಲ್ಲ; ಇದುವರೆಗೆ ಆ ದಿಕ್ಕಿನ ಚಿಂತನೆಯ ಸುಳಿವೂ ಕಂಡಿಲ್ಲ.

ಈಗ ಇವರೆಲ್ಲರನ್ನೂ ಬಿಟ್ಟು 'ರಿಯಲ್ ಸ್ಟಾರ್' ಕಡೆ ಗಮನ ಹರಿಸಿದರೆ, ಉಪೇಂದ್ರರ ಪ್ರಯತ್ನ ವಿಶಿಷ್ಟ ಎನ್ನಲೇಬೇಕು. ಏಕೆಂದರೆ ಅವರು ಹೊಸ ಪಕ್ಷ ಕಟ್ಟುತ್ತಿರುವವರು–– ಎಂಜಿಆರ್ ಮಾದರಿಯಲ್ಲೇ. (ಮುಂಚೆ ಇವರು ದಿಲ್ಲಿಯಲ್ಲಿ ಅಮಿತ್ ಷಾ ಸಮ್ಮುಖದಲ್ಲಿ ಬಿಜೆಪಿ ಸೇರುವರೆಂಬ ಸುದ್ದಿಗಳಿದ್ದವು. ಅದೇನಾಯಿತೋ, ಸ್ವಂತ ಪಕ್ಷದ ಪ್ರಯತ್ನಕ್ಕೆ ಕೈ ಹಾಕಿದರು.) ಆದರೆ ಅವರೂ ರಸ್ತೆ, ನಲ್ಲಿ, ಜನರ ಸೌಕರ್ಯ– ಇಂಥ– ಬಿಬಿಎಂಪಿ ಕಾರ್ಪೊರೇಟರ್‌ನ ಉಸಾಬರಿಗಳಂತೆ ಕಾಣುವ ನಗಣ್ಯ ಕೆಲಸಗಳಾಚೆಗೆ ಯಾವ ದೊಡ್ಡ ರಾಜಕೀಯ ಕನಸುಗಳ ಪ್ರಸ್ತಾಪವನ್ನೂ ಮಾಡಿಲ್ಲ. ನಮ್ಮ ದೇಶ ಹಾಗೂ ಸಮಾಜ ಎದುರಿಸುತ್ತಿರುವ ಗಹನ ಸವಾಲುಗಳ ಕಲ್ಪನೆಯೇ ಅವರಿಗಿದ್ದಂತಿಲ್ಲ; ಪರಿಹಾರ ಹುಡುಕುವ ಮಾತು ದೂರವೇ ಉಳಿಯಿತು. ಅವರ ಒಲವುಗಳನ್ನು ಗಮನಿಸಿದರೆ– ಅವರ ಪ್ರಯತ್ನ ಬಿಜೆಪಿಯ ಬಿ ಟೀಂ ಆಗಿ ಪರ್ಯವಸಾನಗೊಂಡರೆ ಯಾರಿಗೂ ಅಚ್ಚರಿಯಾಗುವುದಿಲ್ಲ.

ಈ ಸಂಶಯ ಬಂದಿದ್ದೇಕೆಂದರೆ, ಕಳೆದ ಇಪ್ಪತ್ತು ವರ್ಷಗಳಲ್ಲಿ ದೇಶದಲ್ಲಿ ಮೂರೂವರೆ ಲಕ್ಷ ರೈತರು (ಪ್ರತಿ ನಲವತ್ತು ನಿಮಿಷಗಳಿಗೆ ಒಬ್ಬ!) ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದಾಗಲೀ; ಗೋರಕ್ಷಣೆ ಹೆಸರಲ್ಲಿ ಜನರನ್ನು ದಿನದಿನವೂ ರಸ್ತೆಗಳಲ್ಲಿ ರಾಜಾರೋಷಾಗಿ ಹೊಡೆದು ಕೊಲ್ಲುತ್ತಿರುವ ಭಯೋತ್ಪಾದಕ ಕೃತ್ಯವಾಗಲೀ; ಸತ್ತ ದನದ ಚರ್ಮ ಸುಲಿಯುತ್ತಿದ್ದರೆಂದು ಗುಜರಾತಿನ ಊನಾದ ದಲಿತರನ್ನು ಕಾರಿಗೆ ಸರಪಳಿ ಹಾಕಿ ಕಟ್ಟಿ ಕಬ್ಬಿಣದ ಸರಳುಗಳಿಂದ ಥಳಿಸಿದ ಹೃದಯ ವಿದ್ರಾವಕ ಘಟನೆ ಬಗ್ಗೆಯಾಗಲೀ.... ಉಪೇಂದ್ರರಿಗೆ ಗೊತ್ತಿದ್ದ ಹಾಗೆ ಕಾಣುವುದಿಲ್ಲ. ಇವೆಲ್ಲ ಅವರ ರಾಜಕೀಯ ಜವಾಬ್ದಾರಿಗಳ ವ್ಯಾಪ್ತಿಗೆ ಬರುತ್ತವೆ ಎಂಬ ಕಲ್ಪನೆ ಅವರಿಗಿದೆಯೇ? ಇದುವರೆಗೂ ಅವರು ಅಂಥ ಸೂಚನೆಯನ್ನೇನೂ ಕೊಟ್ಟಿಲ್ಲ.

ಹೊಸ ಪಕ್ಷದ ಘೋಷಣೆ ಮಾಡಿದ ತರುಣದಲ್ಲಿ ಅವರಿಗೆ ಟಿವಿ ಸಂದರ್ಶನವೊಂದರಲ್ಲಿ ಪ್ರಧಾನಿ ಮೋದಿಯವರ ಬಗ್ಗೆ ಪ್ರಶ್ನೆ ಕೇಳಿದಾಗ, ಉಪೇಂದ್ರ ಕೈ ಮುಗಿದು 'ಗ್ರೇಟ್ ಲೀಡರ್' ಎಂದು ಉದ್ಗರಿಸಿದರು! ಆ ನರೇಂದ್ರ ಮೋದಿಯವರ ಆಡಳಿತದಿಂದಾಗಿ ದೇಶ ಏನೇನೆಲ್ಲ ಕಾಣಬೇಕಾಗಿ ಬಂದಿದೆ ಎಂಬ ಅರಿವಿದ್ದವರ ಪ್ರತಿಕ್ರಿಯೆ ಹಾಗಿರಲು ಸಾಧ್ಯವೇ? ಅಂತೂ ಒಂದು ಬಗೆಯಲ್ಲಿ ಇಡೀ ದೇಶವನ್ನೇ ಮೋದಿಗುರುಡು ಆವರಿಸಿರುವಾಗ ಇವರನ್ನು ಮಾತ್ರ ಯಾಕೆ ಪ್ರತ್ಯೇಕಿಸಿ ನೋಡುವುದು ಎಂಬ ಪ್ರಶ್ನೆಯೂ ಇದೆ.

ಸಿನಿಮಾ ರಂಗದಿಂದ ರಾಜಕೀಯಕ್ಕೆ ಕಾಲಿಟ್ಟಿರುವ ಯಾರಾದರೂ ಒಬ್ಬರು, ದೇಶದ ಈ ನೂತನ ವಿದ್ಯಮಾನಗಳ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆಯೇ? ಗೌರಿ ಲಂಕೇಶ್ ಹತ್ಯೆ ಆದ ಸಂದರ್ಭದಿಂದ ನಟ ಪ್ರಕಾಶ್ ರೈ ಒಬ್ಬರಿಗೆ ಮಾತ್ರ ಬಾಯಿ ಬಂದಿದೆ. ಆದರೆ ಅವರು ರಾಜಕೀಯಕ್ಕೆ ಬಂದಿಲ್ಲ! 'ಈ ದೇಶದ ಪ್ರಜೆಯಾಗಿ ಸಂವಿಧಾನದತ್ತ ಅಭಿವ್ಯಕ್ತಿ ಸ್ವಾತಂತ್ರ್ಯ ಎತ್ತಿ ಹಿಡಿಯಲು ನಾನು ಮಾತನಾಡುತ್ತಿದ್ದೇನೆ. ನಾನು ಎಡವೂ ಅಲ್ಲ, ಬಲವೂ ಅಲ್ಲ' ಎಂದು ಅವರೇ ಸ್ಪಷ್ಟವಾಗಿ ಹೇಳಿದ್ದಾರೆ.

ಇಲ್ಲಿ ಯಾರು ಬೇಕಾದರೂ ರಾಜಕೀಯ ಪ್ರವೇಶ ಮಾಡಬಹುದು, ಜನರ ಆಶೀರ್ವಾದವಿದ್ದರೆ ಅಧಿಕಾರಕ್ಕೂ ಏರಬಹುದು. ನಮ್ಮ ದೇಶದ ಸಂವಿಧಾನ ಅಷ್ಟಂತೂ ಅವಕಾಶ ಕೊಟ್ಟಿದೆ. ಆದರೆ ಸಿನಿಮಾ ಲೋಕದ ರಾಜಕಾರಣಿಗಳು ಭರಾಟೆಯಲ್ಲಿ ನುಗ್ಗಿ ಬಂದು ಕಡೆಗೆ ಹತ್ತರಲ್ಲಿ ಒಬ್ಬರಾಗಿ ಉಳಿಯುವುದಾದರೆ... ಈ ನಿರಾಸೆಯಲ್ಲೇ 2018ಕ್ಕೆ ಕಾಲಿಡುತ್ತಿದ್ದೇವೆ. ಆದರೆ ಒಂದಂತೂ ನಿಜ– 2018ರಲ್ಲಿ ಕನ್ನಡ ಚಿತ್ರರಂಗದಲ್ಲಿ ಬಹುತೇಕ ನಟ ನಟಿಯರು ರಾಜಕೀಯದ ಧೂಳಿನಲ್ಲಿ ಮುಳುಗೇಳುವ ಎಲ್ಲ ಸಾಧ್ಯತೆಗಳೂ ಕಾಣಿಸುತ್ತಿವೆ. ಹೊಸ ವರ್ಷದಲ್ಲಿ ಇವೆಲ್ಲ ಬೆಳವಣಿಗೆಗಳು ಯಾವ ಬಣ್ಣ, ಯಾವ ರೂಪ ತಳೆಯಬಹುದೋ ಕಾದು ನೋಡಬೇಕು. ■




**ನಮ್ಮ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿದ ಶ್ರೀ ಬಿ.ಹೆಚ್.ಆಚಾರ್ಯ ಗುರೂಜಿ ಅವರಿಗೆ ನಮ್ಮ ಅಭಿನಂದನೆಗಳು**

ತುಂಬಾ ಖುಷಿ ಹಾಗೂ ಸಂತೋಷ ಆಗುತ್ತೆ ಶ್ರೀಶ್ರೀ ಆಚಾರ್ಯ ಗುರೂಜಿಯವರ ಬಗ್ಗೆ ಮಾತನಾಡೋಕೆ ಯಾಕೆಂದ್ರೇ ಇವತ್ತು ನಮಗೆ ಸ್ವಂತ ಉದ್ಯೋಗ, ಸ್ವಂತ ಮನೆ ಜೊತೆಗೆ ಆರೋಗ್ಯ ಭಾಗ್ಯ, ಸುಖಃ, ಸಂತೋಷ, ನೆಮ್ಮದಿ ಇದೆ ಅಂದ್ರೆ ಅದಕ್ಕೆಲ್ಲಾ ಕಾರಣ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವ್ರು. ನಾವು ಸುಮಾರು 10 ವರ್ಷದಿಂದ ಸ್ವಂತದ್ದಾಗಿ 3–4 ಬಿಸ್‌ನೆಸ್ ಮಾಡಿದ್ರೂ ಯಾವ ಬಿಸ್‌ನೆಸ್ ಕೂಡ ಕೈ ಹಿಡಿಯಲಿಲ್ಲ ಎಷ್ಟೇ ಪ್ರಯತ್ನ ಪಟ್ರೂ ಬಿಸ್‌ನೆಸ್‌ಲ್ಲಿ ಇಂಪ್ರೂವ್‌ಮೆಂಟ್ ಆಗದೇ ಸಿಕ್ಕಾಪಟ್ಟೆ ಸಾಲ ಮಾಡ್ಕೊಂಡು ಬಿಟ್ಟಿದ್ವಿ ತುಂಬಾ ಅಂದ್ರೆ ತುಂಬಾ ಕಷ್ಟ ಅನುಭವಿಸಿದ್ದೀವಿ, ಒಂದು ಹೊತ್ತಿನ ಊಟಕ್ಕೂ ಕೂಡಾ ನಮ್ಮಲ್ಲಿ ಹಣ ಇರ್ತಿರ್ಲಿಲ್ಲಾ ಎಷ್ಟೋ ಸಾರಿ ಈ ಜೀವವೇ ಬೇಡಾ ಅಂತಾ ಸಾಯೋಕೆ ಕೂಡಾ ಹೋಗಿದ್ವಿ ಆದರೇ ಮಕ್ಕಳ ಮುಖ ನೋಡ್ಕೊಂಡು ಹೇಗೋ ಜೀವನ ಸಾಗಿಸ್ತಾ ಇದ್ವಿ. ಅಂತಹ ಕಷ್ಟಕರ ಸಮಯದಲ್ಲಿ ನಮಗೆ ದೇವರ ಹಾಗೆ ಕೈಹಿಡಿದು ಕಾಪಾಡಿದವ್ರೂ ಅಂದ್ರೆ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವ್ರು. ನಾವೊಂದ್ಸಲ ಶ್ರೀ ಅಷ್ಟಲಕ್ಷ್ಮೀ ಜ್ಯೋತಿಷ್ಯ ಮಂದಿರ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವರನ್ನು ಭೇಟಿ ಮಾಡಿದ್ವಿ ನಮ್ಮ ಎಲ್ಲಾ ಕಷ್ಟಕಾರ್ಪಣ್ಯಗಳನ್ನು ಅರ್ಥೈಸಿಕೊಂಡ ಗುರೂಜಿಯವ್ರು ನಮಗೆ ಪರಿಹಾರ ತಿಳಿಸಿದ್ರು ಎಷ್ಟೇ ಕಷ್ಟ ಆದ್ರೂ ಚಿಂತೆಯಿಲ್ಲ ಅಂತಾ ಹೇಳಿ ಗುರೂಜಿವ್ರೂ ಹೇಳಿದ ಪರಿಹಾರ ಮಾಡಿಕೊಂಡು ಬಂದ್ವಿ ನಂತರ ಕೆಲವೇ ದಿನಗಳಲ್ಲಿಯೇ ನಮ್ಮ ಎಲ್ಲಾ ಸಮಸ್ಯೆಗಳು ಶಾಶ್ವತ ಪರಿಹಾರ ಆಯ್ತು ಈಗ ನಾವೇ 2 ಬಿಸ್‌ನೆಸ್ ಮಾಡ್ತಾ ಇದ್ದೀವಿ. ಬಿಸ್‌ನೆಸ್ ತುಂಬಾ ಇಂಪ್ರೂವ್‌ಮೆಂಟ್ ಇದೇ. ಸಾಲ ಎಲ್ಲಾ ತೀರಿತು, ನಾವೇ ಒಂದಿಷ್ಟು ಜನಕ್ಕೆ ಕೆಲಸ ಕೂಡಾ ಕೊಟ್ಟಿದ್ವಿ. ಈಗ ನಮಗೆ ಯಾವ ಸಮಸ್ಯೆಗಳಿಲ್ಲದೇ ನೆಮ್ಮದಿಯಾಗಿ ಇದ್ದೀವಿ ಇಂಥಾ ನೆಮ್ಮದಿಯ ಬದುಕನ್ನು ಕಲ್ಪಿಸಿಕೊಟ್ಟಂತಹ ಶ್ರೀಶ್ರೀ ಆಚಾರ್ಯ ಗುರೂಜಿಯವರಿಗೆ ನಾವೂ ಯಾವಾಗಲೂ ಚಿರಋಣಿಯಾಗಿರ್ತಿವಿ. ನಿಮಗೂ ಕೂಡಾ ಯಾವುದೇ ಕಷ್ಟಕರವಾದ ಸಮಸ್ಯೆಗಳಿದ್ರೂ ನೇರವಾಗಿ ಗುರೂಜಿಯವರನ್ನು ಭೇಟಿ ಮಾಡಿ ನಿಮ್ಮೆಲ್ಲಾ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ಪಡ್ಕೊಂಡು ನಮ್ಮ ಹಾಗೆ ನೀವೂ ಕೂಡಾ ನೆಮ್ಮದಿಯಾಗಿ ಜೀವನ ಮಾಡ್ತೀರಾ ಅಂತ ನಂಬಿಕೆಯಿಂದ ಹೇಳ್ತಾ ಇದ್ದೇವೆ.

ಗುರೂಜಿಯವರ ಮನೆ ವಿಳಾಸ # 1191, ಶ್ರೀ ಅಷ್ಟಲಕ್ಷ್ಮೀ ಜ್ಯೋತಿಷ್ಯ ಮಂದಿರ ಜಯನಗರ 9ನೇ ಬ್ಲಾಕ್, ರಾಗಿಗುಡ್ಡ ಬಸ್‌ಸ್ಟಾಪ್ ಆರ್ಚ್ ಎದುರುಗಡೆ ಮಾರ್ಕೆಟ್ ರೋಡ್, ರಾಘವೇಂದ್ರ ಉಪಹಾರ ಎದುರುಗಡೆ, ಅಪೋಲೊ ಫಾರ್ಮಸಿ ಮೇಲೆ, ಬೆಂಗಳೂರು

**9880445522, 8884889444**